Indian Journal of History and Archaeology

ISSN (E):2582-225X
VOL-2, ISSUE -4,NOVEMBER-DECEMBER, 2020, 70-80

# ಅದಮ್ಯ: ಏಕಲವ್ಯನನ್ನು ಕುರಿತ ದಾರ್ಶನಿಕ ಕಾದಂಬರಿ

**ಪಾಲಾಕ್ಷ.ಕೆ.ಆರ್.**

**ಪಾಲಾಕ್ಷ.ಕೆ.ಆರ್.**
ಸಂಶೋಧನಾ ವಿದ್ಯಾರ್ಥಿ
ಮಹರಾಜ ಕಾಲೇಜು, ಮೈಸೂರು
ವಿಶ್ವವಿದ್ಯಾನಿಲಯ. ಮೈಸೂರು

ಅದಮ್ಯ ಏಕಲವ್ಯನನ್ನು ಪ್ರಧಾನವಾಗಿಸಿಕೊಂಡ ಕಾದಂಬರಿ. ಈ ಕಾದಂಬರಿಯೂ ಕನ್ನಡ ಸಾಹಿತ್ಯದಲ್ಲಿ ಹೀಗಾಗಲೆ ಪ್ರಸಿದ್ಧಿ ಹೊಂದಿದ ಹಲವು ಹತ್ತು ಪ್ರಕಾರಗಳ ಕೃತಿಗಳ ಹಿನ್ನೆಲೆಯ ವಸ್ತು ಆಶಯಗಳ ದಾರಿಯಿದೆ. ರಾಷ್ಟ್ರಕವಿ ಕುವೆಂಪು ಅವರ 'ಬೆರಳ್ಗೆ ಕೊರಳ್' ನಾಟಕವೂ ಕರ್ಮತತ್ವದ ನೆಲೆಯಲ್ಲಿ ಸ್ಥಾಪಿತ ಮೌಲ್ಯಗಳನ್ನು ನಿರೂಪಿಸುತ್ತದೆ. ಗೋವಿಂದಪೈ ಅವರ 'ಹೆಬ್ಬೆರಳು' ನಾಟಕ ಆರ್ಯ-ಆನಾರ್ಯ ಭಾವನೆಯನ್ನು ಒಗ್ಗೂಡಿಸುವ ಪ್ರಯತ್ನದ ಸಮನ್ವಯ ನೆಲೆಯಲ್ಲಿ ರಚಿತವಾಗಿದೆ. ಕನ್ನಡ ನೆಲದ ಕ್ರಾಂತಿಯ ಕವಿ ಡಾ.ಸಿದ್ದಲಿಂಗಯ್ಯ ಅವರ ಏಕಲವ್ಯನನ್ನು ಕುರಿತ ಕೃತಿ ವರ್ಗ-ಸಂಘರ್ಷದ ನೆಲೆಯಲ್ಲಿ ಧ್ವನಿತವಾಗಿದೆ. ಇವುಗಳಗಿಂತಲೂ ಒಂದು ಭಿನ್ನವಾದ 'ಪರಿವರ್ತನಾ ಶೀಲ' ತತ್ವದ ನೆಲೆಯಲ್ಲಿ ಜ.ಹೊ.ನಾರಾಯಣಸ್ವಾಮಿ ಅವರು 'ಅದಮ್ಯ' ಎಂಬ 'ಏಕಲವ್ಯ'ನನ್ನು ಕುರಿತ ದಾರ್ಶನಿಕ ಕಾದಂಬರಿಯನ್ನು ಚಿತ್ರಿಸಿದ್ದಾರೆ.

ಅದಮ್ಯ ಕಾದಂಬರಿಯ ಕೇಂದ್ರ ವಸ್ತುವಿಷಯವನ್ನು ಕುರಿತಂತೆ ಹೇಳುವುದಾದರೆ; ಏಕಲವ್ಯನನನ್ನು ಕೇಂದ್ರ ಪಾತ್ರವಾಗಿ ಇಟ್ಟುಕೊಂಡು ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಪ್ರಕಾರಗಳಲ್ಲಿ ಸಾಹಿತ್ಯ ರಚನೆಯಾಗಿತ್ತು. ಮಹಾಭಾರತದ ಏಕಲವ್ಯನ ಕಥೆ ಕೈಲಾಸಂ, ಗೋವಿಂದ ಪೈ, ಕುವೆಂಪು, ಸಿದ್ದಲಿಂಗಯ್ಯ ಅವರಂಥ ಮಹಾನ್ ಕವಿಗಳ ಎಪಿಕ್ ಪ್ರಮಾಣದ ನಾಟಕಗಳಗೆ ಮೌಲಿಕವಾದ ವಸ್ತುವಾಗಿದೆ. ಜಹೊನಾ ಅವರು ಅದೇ ಕಥೆಯನ್ನು ತಮ್ಮ ದಾರ್ಶನಿಕ ಕಾದಂಬರಿ 'ಅದಮ್ಯ'ಕ್ಕೆ ವಸ್ತುವನ್ನಾಗಿ ಬಳಸಿಕೊಂಡು ಆ ಮುಖ್ಯನವಾಗಿಯೇ ಕನ್ನಡಕ್ಕೆ ತಂದಿದ್ದಾರೆ. ಭಾರತದ ಮಹಾಕಾವ್ಯಗಳಲ್ಲಿ ಒಂದಾಗಿರುವಂಥ ಮಹಾಭಾರತದಲ್ಲಿ ಕಾಡು ಬೇಸ್ತನಾಗಿರುವ ಏಕಲವ್ಯನಿಗೆ ಮಾಡಿರುವ ಅಪಮಾನ ಮತ್ತು ಅನ್ಯಾಯವನ್ನು ಸರಿಪಡಿಸುವುದೇ ಈ ಎಲ್ಲಾ ಆಧುನಿಕ ಸಾಹಿತಿಗಳ ಆಶಯವಾಗಿದೆ.

ಪ್ರತಿಯೊಬ್ಬರೂ ತಂತಮ್ಮ ಪ್ರತಿಭೆ, ಚಿಂತನೆ, ಭಾವದರ್ಶನಗಳಿಗೆ ಅನುಗುಣವಾಗಿ ವಸ್ತು ಪಾತ್ರ ಸನ್ನಿವೇಶ ನಿರೂಪಣಾ ಕೌಶಲ್ಯಗಳನ್ನು ಮಾರ್ಪಡಿಸಿಕೊಂಡು, ಒಂದೊಂದು ಕೃತಿಯೂ ನವೋನವವೆನ್ನುವಂತೆ, ಸ್ವತಂತ್ರವೆನ್ನುವಂತೆ ರಚಿಸಿದ್ದಾರೆ. ಒಂದು ಭಾಷೆಯ ಪದ ಸಮುಚ್ಛಯಗಳಿಗೆ ಒಂದು ಚರಿತ್ರೆ ಇದೆ. ಆ ಭಾಷೆಯನ್ನು ಒಬ್ಬ ಬರಹಗಾರ ಅರಿಯುವಾಗ ಅದನ್ನು ತನ್ನಿಂದ ಹಿಂದಿರುವ ಅನೇಕ ಬರಹಗಾರರು ಅನೇಕ ಬಾರಿ ಜ್ಞಾಪಿಸಿಕೊಳ್ಳಬೇಕು. ಬೆರಳ್‌ಗೆ ಕೊರಳ್ ಕುವೆಂಪು ಪ್ರತಿಭೆಯ ಹೆಗ್ಗುರುತುಗಳಂತೆ ಇವೆ. ಇವೆರಡರಲ್ಲೂ ಮಹಾಭಾರತದಿಂದ ಆಯ್ದ ವಸ್ತುವಿನ್ಯಾಸವಿದೆ. ಪ್ರಸ್ತುತದಲ್ಲಿ ಬೆರಳ್‌ಕೊರಳ್ ನಾಟಕವು ಉತ್ತಮವಾದ ಕೃತಿಯಾಗಿದೆ.  ಜಹೊನಾ ಅವರು ಕುವೆಂಪು ಅವರಿಂದ ಪ್ರಭಾವಿತರಾದ ಕಾರಣ ಕುವೆಂಪು ಅವರ ಮತ್ತು ಜಹೊನಾ ಅವರ ಎರಡು ಕೃತಿಗಳನ್ನು ತೌಲನಿಕವಾಗಿ ನೋಡಲು ಪ್ರಯತ್ನಿಸಬಹುದು. ಹಾಗಾಗಿ ಮೊದಲು ಬೆರಳ್‌ಗೆ ಕೊರಳ್ ಕೃತಿಯನ್ನು ಕುರಿತಾಗಿ ಸಂಕ್ಷಿಪ್ತವಾಗಿ ವಿಶ್ಲೇಷಿಸಿ ನೋಡಬಹುದು.

ಮಹಾಭಾರತ ಆದಿಪರ್ವಕ್ಕೆ ಸೇರಿದ ಕಥಾ ಭಾಗದಿಂದ ಆಯ್ದ ವಸ್ತುವಾಗಿ ಬೆರಳ್‌ಗೆ ಕೊರಳ್ ನಾಟಕವು ಗಂಭೀರವಾಗಿದೆ. ವಸ್ತುವಿನಲ್ಲಿ ಸಹಜವಾದ ದುರಂತವಿರುವುದರಿಂದ ಇದರ ಬೆಲೆ ಹಿರಿದಾಗಿದೆ. ಬಹುಶಃ ಕುವೆಂಪು ಅವರಿಗೆ ನಾಟಕದಲ್ಲಿ ಕಂಡುಬರುವ ಏಕಲವ್ಯನ ಪಾತ್ರವೇ ಈ ಆಯ್ಕೆಗೆ ಕಾರಣವಿರಬಹುದು. ಏಕಲವ್ಯನು ಈ ನಾಟಕದ ನಾಯಕನಾಗಿರುವನು. ಮಹಾಭಾರತದಲ್ಲಿನ ಏಕಲವ್ಯನ ವೃತ್ತಾಂತಕ್ಕೆ ಬರದಂತೆ ಏಕಲವ್ಯನ ಪಾತ್ರದಲ್ಲಿ ದುರಂತವನ್ನು ನಿರೂಪಿಸುವ ಸಲುವಾಗಿ ಹೆಬ್ಬೆರಳು ನಾಟಕವು ರಚಿತವಾಗಿದೆ. ಆದುದರಿಂದ ಏಕಲವ್ಯನ ದುರಂತಕ್ಕೆ ದ್ರೋಣರು ಕಾರಣರಾಗುವುದಿಲ್ಲ. ಮತ್ತು ಆತನ ದುರಂತಕ್ಕೆ ಮರುಗುವ ಹಾಗೂ ಅಂಥ ಶಿಷ್ಯನನ್ನು ನೆನಪಿನಲ್ಲಿರಿಸಿಕೊಳ್ಳುವ ಗುರುವಾಗಿ ಬಿಡುತ್ತಾನೆ. ಇದರಿಂದ ದ್ರೋಣರು ಒಳ್ಳೆಯ ಗುರುವೆಂದು ಅನ್ನುವಂತಾಗುತ್ತದೆ.

ಕುವೆಂಪು ಅವರ ಕೃತಿ ಈ ಎರಡೂ ನಾಟಕಗಳು ಬೆಳಕಿಗೆ ಬಂದ ಮೇಲೆ ಪ್ರಕಟವಾದುದರಲ್ಲಿ ಸಾರ್ಥಕತೆಯಿದೆ. ಈ ಹಿಂದಿನ ನಾಟಕಗಳಿಂದ ಕುವೆಂಪು ಅವರು ಪಾಠ ಕಲಿತರೆಂದು ಹೇಳಬೇಕಾಗುವುದಿಲ್ಲ. ಏಕೆಂದರೆ ಇವರಿಬ್ಬರೂ ಒಂದೇ ವಸ್ತುವನ್ನು ಕುರಿತು ಸ್ವತಂತ್ರವಾಗಿ ವಿಚಾರ ಮಾಡುತ್ತಿರಬೇಕೆಂಬ ಅನುಮಾನವು ಆಗಿನ ಕಾಲಸ್ಥಿತಿಯಿಂದಲೇ ತಿಳಿದುಬರುತ್ತದೆ. ದುರಂತ ವಸ್ತುವಿನ್ಯಾಸವನ್ನು ಕನ್ನಡ ರಂಗಕ್ಕೆ ಬಳಸುವ ಪ್ರಯತ್ನವನ್ನು ರಂಗ ಪ್ರಜ್ಞೆ ಸಾಹಿತ್ಯ ಪ್ರಜ್ಞೆಯುಳ್ಳವರೆಲ್ಲಾ ವಿಚಾರ ಮಾಡುತ್ತಿದ್ದ ಕಾಲವಾಗಿತ್ತು. ಅದು ಕುವೆಂಪು ಅವರಿಗೆ ಪ್ರಗತಿಯನ್ನು ಸಾಧಿಸಲು ಮನಸ್ಸು ಮಾಡಿದ್ದು ಸಾರ್ಥಕವೂ ಹೆಚ್ಚು ಫಲದಾಯಕವೂ ಆಗಿರುವುದರ ಗುರುತಾಗಿ 'ಬೆರಳ್‌ಗೆ ಕೊರಳ್'' ನಾಟಕವು ರಚಿತವಾಗಿದೆಯಷ್ಟೆ.

ಬೆರಳ್‌ಗೆ ಕೊರಳ್ ಮೊದಲಾದ ನಾಟಕಗಳಲ್ಲಿ ಸಂಸ್ಕೃತ ಮಿಶ್ರಿತ ಹಳೆಗನ್ನಡ ಭಾಷೆಯ ಧಾಟಿಯನ್ನು ಕಾಣುವಂತೆಯೇ ಇಷ್ಟೆಲ್ಲ ದೋಷಗಳು ಕಂಡುಬಂದರೂ ಬೆರಳ್‌ಗೆ ಕೊರಳ್ ನಾಟಕ ಭಾಷಾ ದೃಷ್ಟಿಯಿಂದ ಯಶಸ್ಸು ಪಡೆದ ನಾಟಕವಾಗಿದೆ. ಆದರೆ, ಶೂದ್ರ ತಪಸ್ವಿ ನಾಟಕಗಳ ಭಾಷೆ ಪೆಡೆಸಾಗಿದೆ. ಸಹೃದಯರಿಗೆ ತೀರ ಹತ್ತಿರ ಎನ್ನಿಸೆ ದೂರ ಎನ್ನಿಸುತ್ತದೆ. ಕುವೆಂಪು ಅವರು ಸರಳ ರಗಳೆಯನ್ನು ಕನ್ನಡದಲ್ಲಿ ಕಸಿ ಮಾಡಲು ನಾಟಕಗಳಲ್ಲಿ ಮಾಡಿರುವ ಪ್ರಯೋಗ ಆ ಪ್ರಯೋಗಕ್ಕೆ ಅನುಗುಣವಾಗಿ ಭಾಷೆಯನ್ನು ವೈವಿದ್ಯಮಯವಾಗಿ ದುಡಿಸಿಕೊಂಡಿರುವ ರೀತಿ ಗಮನಾರ್ಹವಾದದ್ದು. ವಚನಕಾರರ ಹಾಗೆ ಭಾಷೆಯನ್ನು ಬಳಸುವುದು ಇಪ್ಪತ್ತನೆಯ ಶತಮಾನದ ಪ್ರತಿಭಾವಂತ ಕುವೆಂಪು ಅವರಿಗೆ ಮಾತ್ರ. ಬೆರಳ್‌ಗೆ ಕೊರಳ್ ನಾಟಕದ ವಸ್ತು ಪೌರಾಣಿಕ ಆವರಣವನ್ನು ಪಡೆದುಕೊಳ್ಳುತ್ತವೆ. ಬೆರಳ್‌ಗೆ ಕೊರಳ್ ವಸ್ತು ಮಹಾಭಾರತದಲ್ಲಿ ಬರುವ ಒಂದು ಪ್ರಸಂಗ. ಬೆರಳ್‌ಗೆ ಕೊರಳ್ ಕುವೆಂಪು ಅವರ ನಾಟಕಗಳಲ್ಲೇ ಅತಿಹೆಚ್ಚು ಗಮನ ಸೆಳೆಯುವ ಕೃತಿ. ಕುವೆಂಪು ಅವರ ವೈಚಾರಿಕತೆ ಹಾಗೂ ತಾತ್ವಿಕ ನಿಲುವಿನ ಸ್ವರೂಪವನ್ನು ಕುರಿತು ಮಾತನಾಡುವಾಗ; ಈ ನಾಟಕವನ್ನು ಸಾಮಾನ್ಯವಾಗಿ ಎಲ್ಲರೂ ಚರ್ಚೆಗೆ ಆರಿಸಿಕೊಳ್ಳುತ್ತಾರೆ. ವಸ್ತು ಆಶಯ ಆಕೃತಿ ಈ ಎಲ್ಲ ದೃಷ್ಟಿಯಿಂದಲೂ ಬೆರಳ್‌ಗೆ ಕೊರಳ್ ನಾಟಕಕ್ಕೆ ಕುವೆಂಪು ಅವರ ಸಮಗ್ರ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಇದು ಮಾತ್ರವಲ್ಲದೇ ಕನ್ನಡ ಸಂಸ್ಕೃತಿ ಚರಿತ್ರೆಯನ್ನು ಚರ್ಚಿಸುವಾಗ ಬೆರಳ್‌ಗೆ ಕೊರಳ್ ನಾಟಕವನ್ನು ಹೊರತು ಪಡಿಸಿ ನಡೆಸುವ ಚರ್ಚೆ ಅಪೂರ್ಣವೆನ್ನಿಸುತ್ತದೆ.

ಪೌರಾಣಿಕ ವಸ್ತುವನ್ನು ಆರಿಸಿಕೊಳ್ಳುವಾಗ ಸಹಜವಾಗಿಯೇ ಲೇಖಕ’ರಿಗೆ ಎರಡು ಬಗೆಯ ಅನುಕೂಲಗಳು ಒದಗುತ್ತದೆ. ಮೊದಲನೆಯದು ಪರಿಚಿತವಾದ ಗಟ್ಟಿಯಾದ ಕಥಾವಸ್ತುವೊಂದು ದೊರಕಿಬಿಡುತ್ತದೆ. ಎರಡನೆಯದು ಈ ಪರಿಚಿತ ವಸ್ತುವನ್ನು ಪುನರ್ ಅಭಿವ್ಯಕ್ತಿಸುವುದು ಅವರಿಗೆ ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಲೇಖಕರು ಅನುಸರಿಸುವ ಕ್ರಮವಿದ್ದು. ಆದರೆ, ಕುವೆಂಪು ಅವರು ಮಾತ್ರ ಇಂಥಲ್ಲಿ ಹೆಚ್ಚಿನ ಸವಾಲನ್ನು ಎದುರಿಸದಂತೆ ಕಾಣುತ್ತದೆ. ಪರಿಚಿತ ಪ್ರಸಂಗವನ್ನು ಪುನರ್ ರೂಪಿಸುವಾಗ ಸಮಕಾಲೀನ ಸಂವೇದನೆಯನ್ನು ಅಭಿವ್ಯಕ್ತಿಸುವುದು ಒಂದು ನೆಲೆಯಾದರೆ, ಈಗಾಗಲೇ ಪುರಾಣ ಪ್ರಪಂಚ ನಿರ್ಮಿಸಿರುವ ನಂಬಿಕೆ ಮೌಲ್ಯಗಳನ್ನು ಪುನರ್ ಪರೀಕ್ಷೆಗೆ ಒಳಪಡಿಸಿರುವುದು ಆ ಮೂಲಕ ಪರಂಪರೆ ಮುಖಾಮುಖಿಯಾಗಿ ಅದನ್ನು ಪ್ರಶ್ನಿಸುವುದು ಕುವೆಂಪು ಆಶಯವಿದ್ದಂತೆ ತೋರುತ್ತದೆ.

‘ಬೆರಳ್‌ಗೆ ಕೊರಳ್’ ನಾಟಕ ರಚಿಸುವಾಗ ಕುವೆಂಪು ಅವರಿಗೆ ಅರಿವಿದೆ. ರೂಢಿಯ ಪ್ರತಿಮೆಯನ್ನು ಅವರು ಭಗ್ನಗೊಳಿಸುವುದಿಲ್ಲ. ಬದಲಿಗೆ ಅದನ್ನು ಉಜ್ವಲಗೊಳಿಸುತ್ತಾರೆ. ಆದರೆ ತಮ್ಮ ಅದ್ಭುತ ಪ್ರತಿಭಾ ಕೌಶಲದಿಂದ ಅದನ್ನು ಪ್ರಶ್ನಿಸುತ್ತಾರೆ ಮತ್ತು ಪ್ರತಿಭಟಿಸುತ್ತಾರೆ. ಸಂಪ್ರದಾಯಬದ್ಧ ಸಮಾಜವೂ ಸೃಜನಶೀಲತೆಯನ್ನು ಹತ್ತಿಕ್ಕುವ ಸ್ವರೂಪವನ್ನು ಬೆರಳ್‌ಗೆ ಕೊರಳ್ ನಾಟಕ ಅದ್ಭುತವಾಗಿ

ಅನಾವರಣಗೊಳಸುತ್ತದೆ. ಮಾತ್ರವಲ್ಲದೇ ಅದನ್ನು ಸಮರ್ಥವಾಗಿಯೇ ಎದುರಿಸುತ್ತದೆ. ಬೆರಳನ್ನು ಬೇಡುವ ಪ್ರತಿಷ್ಠಿತ ಶಕ್ತಿಗೆ ದಮನಕ್ಕೊಳಗಾದ ಸೃಜನಶೀಲ ಪ್ರತಿಭೆ ಸಕಾರಣವಾಗಿಯೇ ಕೊರಳು ಕೇಳುತ್ತದೆ.

ಬೆರಳ್‌ಗೆ ಕೊರಳ್ ನಾಟಕದಲ್ಲೂ ಈ ಪುರಾಣ ಪ್ರತಿಭೆಯನ್ನು ಕುವೆಂಪು ಅವರು ಹಾಗೆಯೇ ಉಳಸಿಕೊಂಡಿದ್ದಾರೆ. ಅದು ಮಾತ್ರವಲ್ಲದೇ ಮತ್ತಷ್ಟು ಉಜ್ವಲಗೊಳಸಿದ್ದಾರೆ. ಇಲ್ಲಿಯ ಏಕಲವ್ಯನು ಅಪ್ರತಿಮ ಗುರುಭಕ್ತ ತನ್ನ ಗುರು ವಚನಭ್ರಷ್ಟನಾಗದಂತೆ ಆತ ನೀಡಿದ ವಚನ ಕಾಪಾಡಲು ತನ್ನ ಹೆಬ್ಬೆರಳನ್ನು ಗುರುದಕ್ಷಣೆಯಾಗಿ ಸಂತೋಷದಿಂದಲೇ ಒಪ್ಪಿಸುತ್ತಾನೆ. ಕಥಾವಸ್ತುವಿನ ಮೂಲಸ್ವರೂಪವನ್ನು ಹಾಗೆಯೇ ಉಳಸಿಕೊಂಡಿರುವ ಕುವೆಂಪು ಅವರು ಅದನ್ನು ನಿರ್ವಹಿಸುವ ಕ್ರಮದಲ್ಲಿ ಬೆರಳ್‌ಗೆ ಕೊರಳ್ ನಾಟಕವನ್ನು ಸಂಪೂರ್ಣ ಹೊಸತೆಂಬಂತೆ ಸೃಷ್ಟಿಸಿದ್ದಾರೆ. ಹೊಸ ಅರ್ಥವನ್ನು ಅದಕ್ಕೆ ದಾನ ಮಾಡಿದ್ದಾರೆ. ಶೋಷಣೆ ಹಾಗೂ ಪ್ರತಿಭಟನೆ ಇವುಗಳ ಸ್ವರೂಪವನ್ನು ಅನನ್ಯವೆಂಬಂತೆ ಚಿತ್ರಿಸಿದ್ದಾರೆ. ಆದರೆ ಬೆರಳ್‌ಗೆ ಕೊರಳ್ ನಾಟಕದಲ್ಲಿ ಪ್ರತಿಭಟನೆ ನೋವಿಗೊಳಗಾದ ಜೀವದಿಂದಲೇ ಪ್ರಕಟವಾಗುತ್ತದೆ. ನೋವು ಪ್ರತಿಭಟನೆಯ ರೂಪ ಪಡೆಯುವ ಈ ನಿಲುವು ಕ್ರಾಂತಿಕಾರವಾದದ್ದು ಕನ್ನಡ ಸಂಸ್ಕೃತಿಯಲ್ಲಿ ಹೊಸ ಅಧ್ಯಾಯದ ಆರಂಭವನ್ನು ಸೂಚಿಸುವಂಥದು. ಆದ್ದರಿಂದಲೇ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕುವೆಂಪು ಅವರು ಸಂಸ್ಕೃತಿ ಚಿಂತಕರಿಗೆ ಅತ್ಯಂತ ಮಹತ್ವದ ಲೇಖಕರಾಗಿ ಕಾಣಿಸುತ್ತಾರೆ.

ಬೆರಳ್‌ಗೆ ಕೊರಳ್ ನಾಟಕದಲ್ಲಿ ಮೂರು ದೃಶ್ಯಗಳಿವೆ. ಈ ಮೂರು ದೃಶ್ಯಗಳನ್ನು ಕುವೆಂಪು ಅವರು ಗುರು–ಕರ್ಮ–ಯಜ್ಞ ಎಂದು ಕರೆದಿದ್ದಾರೆ. ಬೆರಳ್‌ಗೆ ಕೊರಳ್ ನಾಟಕವನ್ನು ವಿಶ್ಲೇಷಿಸುವ ಇದೇ ಒಂದು ರೀತಿ ತೋರುಗಂಬವಾಗಿಬಿಟ್ಟಿದೆ. ಬೆರಳ್‌ಗೆ ಕೊರಳ್ ನಾಟಕದ ಮಹತ್ವವೂ ಈ ನಾಟಕದ ವಿನ್ಯಾಸವನ್ನೇ ಗಮನದಲ್ಲಿಟ್ಟುಕೊಂಡು ನಾಟಕವನ್ನು ಪ್ರವೇಶಿಸಿದರೆ, ಈ ನಾಟಕ ವರ್ಣ ಸಂಘರ್ಷದ ಪ್ರಮುಖ ಘಟ್ಟದ ಒಂದು ರೂಪಕವಾಗಿದೆ.

ಬೆರಳ್‌ಗೆ ಕೊರಳ್ ನಾಟಕದಲ್ಲಿ ಕುವೆಂಪು ಹೊಸ ದರ್ಶನ ನೀಡಲು ಪ್ರಯತ್ನಿಸುವುದು ಪ್ರಮುಖ ಸಂಗತಿಯಾಗಿದೆ. ಇದು ಬೆರಳ್‌ಗೆ ಕೊರಳ್ ಕೂಡ ವರ್ಣಾಶ್ರಮ ಧರ್ಮವನ್ನವಲಂಬಿಸಿ ದ್ರೋಣಾಚಾರ್ಯ ಶೂದ್ರ ಪುತ್ರ ಏಕಲವ್ಯನಿಗೆ ಶಸ್ತ್ರವಿದ್ಯೆಯನ್ನು ಕಲಿಸಲು ನಿರಾಕರಿಸದ್ದು, ಈ ಘೋರ ಅನ್ಯಾಯಕ್ಕೆ ಸಂವಾದಿಯಾಗಿ ಶಬ್ದವೇದಿ ವಿದ್ಯೆಯನ್ನು ಕಲಿತು ಅರ್ಜುನನಿಗಿಂತಲೂ ಬಿಲ್ಲು ವಿದ್ಯೆಯಲ್ಲಿ ಏಕಲವ್ಯ ಪ್ರವೀಣನಾಗುತ್ತಾನೆ. ಅದನ್ನು ಸಹಿಸಲಾರದ ಅರ್ಜುನನ ಅನ್ನಋಣ ತೀರಸಲಿಕ್ಕಾಗಿ ದ್ರೋಣರು ಏಕಲವ್ಯನ ಹೆಬ್ಬೆರಳನ್ನು ದಕ್ಷಣೆಯಾಗಿ ಕೇಳ ಶಿಲ್ಪಿಗೆ ಶಿಲೆ ಮೇಣ ಮರಗಳ ಕಲಾವಸ್ತುಗಳಾಗುವಂತೆ, ಕವಿ ಕುವೆಂಪು ಅವರಿಗೆ ಮಹಾಕಾವ್ಯಗಳೇ ಆಗಿರುವಂಥ ಮಹಾಭಾರತ, ರಾಮಾಯಣಗಳ ಘಟನೆಗಳು ಹಾಗೂ

ಉಪಖ್ಯಾನಗಳು ಕಾವ್ಯ ನಾಟಕ ವಸ್ತುಗಳಾಗುತ್ತವೆ. ಕವಿ ನಾಟಕಕಾರ ತನ್ನ ಮನೋಧರ್ಮ ಯುಗಧರ್ಮಗಳಿಗೆ ಅನುವಾಗುವಂತೆ ವಸ್ತುಗಳನ್ನು ಬಳಸಿಕೊಳ್ಳುತ್ತಾನೆ. ಹಾಗೆಯೇ, ಸಂದರ್ಭಗಳನ್ನು ಬದಲಾಯಿಸಿಕೊಂಡು ಪಾತ್ರಗಳನ್ನು ತಿದ್ದಿಕೊಂಡು ತನ್ನ ಸ್ವಂತಿಕೆಯನ್ನು ಮೆರೆಯುತ್ತಾನೆ. ಕುವೆಂಪು ಅವರ ಭಾರತದಿಂದ ಸಾವಿತ್ರಿ–ಸತ್ಯವಾನ್, ಏಕಲವ್ಯ, ಕುರುಕ್ಷೇತ್ರದ ಮುಕ್ತಾಯ ಸನ್ನಿವೇಶ ಕರ್ಣನಿಗೆ ಸಂಬಂಧಿಸಿದ ವಸ್ತುವನ್ನಾಯ್ದುಕೊಂಡು ಕ್ರಮವಾಗಿ ಬೆರಳ್‌ಗೆ ಕೊರಳ್ ನಾಟಕಗಳನ್ನು ರಚಿಸಿದ್ದಾರೆ. ಆ ನಾಟಕಗಳ ಹೆಸರೇ ಅವುಗಳ ಸಂದೇಶ ಉದ್ದೇಶ ಮಹತ್ವಗಳನ್ನು ಸೂಚಿಸುತ್ತವೆ. ತಪಸ್ಸಿಗೆ, ಪ್ರೇಮಕ್ಕೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಕಾಲವೂ ಅವುಗಳಿಗೆ ತಲೆ ಬಾಗುತ್ತದೆನ್ನುವುದು ಸ್ಪಷ್ಟವಾಗುವ ಸಂಗತಿ.

ಬೆರಳ್‌ಗೆ ಕೊರಳ್ ಒಂದು ಪ್ರತಿಮೆಯಾಗಿದೆ. ಕರ್ಣನ ಜನನ ವಿದ್ಯಾಭ್ಯಾಸಗಳ ಪರಿಕ್ರಮವೇ ನಾಟಕದ ಬಹುಮುಖ್ಯ ಉದ್ದೇಶವಾಗಿದೆ. (ಕುವೆಂಪು: ಪುನರ್ಮನನ) ಬೆರಳ್‌ಗೆ ಕೊರಳ್ ನಾಟಕದಲ್ಲಿಯೂ ಶೂದ್ರ ಸಮಸ್ಯೆ ತಲೆಯೆತ್ತುತ್ತ ಅಲ್ಲಿ ಹೆಡೆಯೆತ್ತುವುದು ಬ್ರಾಹ್ಮಣ ಶೂದ್ರ ಸಮರವಲ್ಲ, ಕ್ಷತ್ರೀಯ ಶೂದ್ರ ಸಂಘರ್ಷ. ಇಲ್ಲಿಯ ದ್ರೋಣಾಚಾರ್ಯರಿಗೆ ಶೂದ್ರವರ್ಗಕ್ಕೆ ಸೇರಿದ ಏಕಲವ್ಯನ ಉದ್ಧಾರದಲ್ಲಿ ತೀವ್ರಾಸಕ್ತಿಯುಂಟು. ಏಕಲವ್ಯ ಗುರುವನ್ನರಸಿ ಹಸ್ತಿನಾಪುರಕ್ಕೆ ಹೋದ ಸಂದರ್ಭದಲ್ಲಿ ಬಿಂಕಗುಳಿ ಅರ್ಜುನ ಅವನನ್ನು ಕಂಡು ಕರುಬತ್ತಾನೆ. ಶೂದ್ರನೊಡನೆ ನಮಗೆ ಸಮಚರ್ಯೆ ಸಲ್ಲದೆಂದು ಮುನಿಯುತ್ತಾನೆ. ಈ ಅಂಶಗಳನ್ನು ಜಹೊನಾ ಅವರು ಕುವೆಂಪು ಅವರಿಗಿಂತ ಭಿನ್ನವಾಗಿ ಹೇಗೆ ನಿರ್ವಹಿಸಿದ್ದಾರೆ ಎಂಬುದನ್ನು ಈ ಕೆಳಗಿನಂತೆ ನಿರೂಪಿಸಲಾಗಿದೆ. 'ಅದಮ್ಯ'ದ ಪ್ರಥಮ ಮುದ್ರಣದ ಈ ಕೃತಿ' ಎಂಬ ಶೀರ್ಷಿಕೆಯಡಿಯಲ್ಲಿ ಲೇಖಕರು ಕೃತಿಯ ಮೊದಲಿಗೆ 'ಬೆರಳ್ಗೆ ಕೊರಳ್' ನಾಟಕದಲ್ಲಿ ಗುರು, ಕರ್ಮ, ಯಜ್ಞತತ್ವಗಳನ್ನು ಸಮರ್ಥವಾಗಿ ಧ್ವನಿಸಿದ್ದರೂ ದ್ವಾಪರದ ಏಕಲವ್ಯನ ಬೆರಳನ್ನು ಉಳಿಸುವಲ್ಲಿ ಅವರೂ (ಕುವೆಂಪು) ಯಶಸ್ವಿಯಾಗಲಿಲ್ಲ' ಅದೊಂದು 'ಕೊರತೆ'ಯೆಂದು ಜಹೊನಾ ಭಾವಿಸಿದಂತಿದೆ. 'ಬೆರಳ್ ಕೊರಳ್' ನಾಟಕವೊಂದು ಅನ್ಯೋಕ್ತಿ ವಿಧಾನದ ದೃಷ್ಟಾಂತ ರೂಪಕ. ಅಲ್ಲಿ ದ್ರೋಣರು ತಮ್ಮ ಮಗನೊಂದಿಗೆ ಏಕಲವ್ಯನಿರುವ ವನಕ್ಕೆ ಹೋಗುತ್ತಾರೆ. ಆದರೆ, ಏಕಲವ್ಯನನ್ನು ಭೇಟಿಯಾದವರು ದ್ರೋಣರೊಬ್ಬರೇ. ಅಲ್ಲಿಯೂ ನಾಲ್ಕೇ ಪಾತ್ರಗಳು. ಪ್ರಕೃತಿಯೂ ಒಂದು ಪಾತ್ರ. ಆದರೆ ಪ್ರಕೃತಿಯ ಪಾತ್ರ ಎರಡು ಕಡೆಯೂ ವಿಭಿನ್ನ, ಗುರು, ಕರ್ಮ. ಯಜ್ಞತತ್ತ್ವಗಳ ಮಹತ್ವವನ್ನು ಈ ಪಾತ್ರಗಳ ಮೂಲಕ ಪ್ರತಿಪಾದಿಸುವುದೇ ಆ ದಾರ್ಶನಿಕ ನಾಟಕದ ಉದ್ದೇಶ. ನಾಟಕದ ದ್ರೋಣರು ಜಾತಿ ಪಿಶಾಚಿಯಲ್ಲ; ಮಗ ಅಶ್ವತ್ಥಾಮನೊಂದಿಗಿರಲು ಏಕಲವ್ಯನಿಗೆ ವಿದ್ಯೆ ಕಲಿಯಲು ಅವಕಾಶ ಕಲ್ಪಿಸುತ್ತಾರೆ. ತಂದೆ ತೀರಿಕೊಳ್ಳಲಾಗಿ ಏಕಲವ್ಯ ತನ್ನ ವನಕ್ಕೆ ಹಿಂದಿರುತ್ತಾನೆ. ಆ ದಿವ್ಯಗುರು ಕನಸಿನಲ್ಲಿಯೇ ಎಲ್ಲ ಬಿಜ್ಜೆಗಳನ್ನು ಕಲಿಸುತ್ತಾರೆ.

ಗುರುತತ್ವದ ಪರಾಕಾಷ್ಠೆಯನ್ನಲ್ಲಿ ಕಾಣಬಹುದಾಗಿದೆ.

ಪುರಾಣದ ನೆಲೆಯನ್ನು ಅನುಸರಿಸಿ ಕಾದಂಬರಿ ಪ್ರಕಾರದಲ್ಲಿ ಚಿತ್ರಿತವಾಗಿರುವ 'ಅದಮ್ಯ' ಕಾದಂಬರಿಯ ಏಕಲವ್ಯ ಪ್ರಸಂಗ ಮಾನವತೆಗೆ ಒಡ್ಡಿದ ಬಹುದೊಡ್ಡ ಸವಾಲು. ಶಿಕ್ಷೆ ಆಗಬೇಕಾದ್ದು ಸ್ವಾರ್ಥಕ್ಕೋ? ತ್ಯಾಗಕ್ಕೋ? ಎಂಬ ಪ್ರಶ್ನೆಯೊಂದಿಗೆ ತೆರೆದುಕೊಳ್ಳುತ್ತದೆ. ಈ ಪ್ರಶ್ನೆ ಜಗದ ಪ್ರಶ್ನೆಯಾಗಿದ್ದು, ಇದನ್ನು ನಿಶ್ಶೇಷಗೈಯಲು ಯತ್ನಿಸಿರುವುದೇ ಈ ಕಾದಂಬರಿಯ ವೈಶಿಷ್ಟ್ಯ ಎಂದು ಸ್ವಯಂ ಲೇಖಕರೇ ಹೇಳಿಕೊಂಡಿದ್ದಾರೆ. ಈ ಕೃತಿಯಲ್ಲಿ ಏಕಲವ್ಯನಿದ್ದಾನೆ. ಆದರೆ ಗುರುದಕ್ಷಿಣೆಯಿಲ್ಲ. ಲೇಖಕರ ಮೂಲ ಉದ್ದೇಶವೇ ಬೆರಳನ್ನು ಉಳಿಸುವುದಾಗಿದೆ. ಅದಮ್ಯ ಕಾದಂಬರಿ ಕಿರು ಕೃತಿಯಾದರೂ ಆಶಯದ ನೆಲೆಯಲ್ಲಿ ಗಮನಿಸಬೇಕಾದ ಕೃತಿಯಾಗಿದೆ.

ಕನ್ನಡ ಸಾಹಿತ್ಯದ ಉದಾಹರಣೆಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುವುದಾದರೆ, 'ಅದಮ್ಯ' ಕಾದಂಬರಿಯ ವಿಶೇಷತೆ ಮುಖ್ಯವಾಗಿ ಎರಡು ನೆಲೆಗಳಲ್ಲಿದೆ. ಮೊದಲನೆಯದಾಗಿ, ಪುರಾಣ ವ್ಯಕ್ತಿಯಾದ ಏಕಲವ್ಯನನ್ನು ಈವರೆಗೆ ನಾಟಕ ಪರಂಪರೆಯಿಂದ ಗುರುತಿಸಿ ಅವನಿಗಾದ ಅನ್ಯಾಯಕ್ಕೆ ಸಾಮಾಜಿಕ ಸ್ಥೈರ್ಯ ಮತ್ತು ಬೆಂಬಲ ಕೊಡುವ ಕೆಲಸ ಸಾಹಿತ್ಯದಲ್ಲಿ ಗೋವಿಂದ ಪೈ ಅವರ 'ಹೆಬ್ಬೆರಳು' ಹಾಗೂ ಕುವೆಂಪು ಅವರ 'ಬೆರಳ್ಗೆ ಕೊರಳ್', ಡಾ. ಸಿದ್ದಲಿಂಗಯ್ಯ ಅವ್ರ 'ಏಕಲವ್ಯ' ನಾಟಕದ ಮೂಲಕ ನಡೆದಿದೆ. ಕಾದಂಬರಿ ಪ್ರಕಾರದಲ್ಲಿ ಏಕಲವ್ಯನ ಯಶೋಗಾಥೆಯನ್ನು ವಿವರಿಸಿರುವುದು 'ಅದಮ್ಯ' ಕಾದಂಬರಿಯಲ್ಲಿ ಮಾತ್ರ. ಎರಡನೆಯದಾಗಿ, ಮಹಾಭಾರತದ ಚಕ್ರವ್ಯೂಹದ ಸೂತ್ರಧಾರ ಎನಿಸಿದ ದ್ರೋಣಾಚಾರ್ಯರ ಬಗೆಗೆ ಇಲ್ಲಿಯವರೆಗೆ ನಾವೆಲ್ಲರೂ ಒಪ್ಪಿಕೊಂಡಿದ್ದು 'ಸ್ವಾರ್ಥಿ'ಎಂಬುದನ್ನು. ಆ ಹಣೆಪಟ್ಟಿಯನ್ನು ತೆಗೆದು ಸಾಂಧರ್ಭಿಕ ವ್ಯಕ್ತಿಯನ್ನಾಗಿ ಗುರುತಿಸಿ ದ್ರೋಣಾಚಾರ್ಯರ ಪಾತ್ರಕ್ಕೆ ಅದ್ವಿತೀಯ ಸ್ಥಾನ ನೀಡಿರುವುದು ಈ ಕಾದಂಬರಿಯ ಮತ್ತೊಂದು ವಿಶೇಷತೆ.

ಅದಮ್ಯ ಕಾದಂಬರಿಯು ಅನೇಕ ವಿಮರ್ಶಕರ ಮತ್ತು ವಿದ್ವಾಂಸರ ಗಮನ ಸೆಳೆದಿದೆ. ನಾಡೋಜ ಡಾ. ದೇ. ಜವರೇಗೌಡ ಅವರು ಈ ಆವೃತ್ತಿಗೆ ಮೌಲಿಕವಾದ ದೀರ್ಘ ಹಾರೈಕೆ ಬರೆದು ಅಭಿನಂದಿಸಿದ್ದಾರೆ. ಸೂಕ್ಷ್ಮ ಅಧ್ಯಯನದಿಂದ ಮೂಡಿದ ವಿಶ್ಲೇಷಣೆ ಈ ಕೃತಿಯ ಅಂತಃಸತ್ವದ ಹೊಳವುಗಳನ್ನು ತಾರ್ಕಿಕ್ ನೆಲೆಯಿಂದ ಕೂಡಿದೆ ಎಂದಿದ್ದಾರೆ. ಕನ್ನಡ ಸಾಹಿತ್ಯಲೋಕದ ಮತ್ತೋರ್ವ ಚಿಂತಕರಾದ ಡಾ. ಶಂಕರ ಮೊಕಾಶಿ ಪುಣೇಕರ ಅವರು 'ನಿಮ್ಮ ಅದಮ್ಯ ಅದ್ಭುತವಾಗಿದೆ. ನಾನು ದ್ರೋಣರ ಬಗೆಗೆ ಬರೆದಿದ್ದರೆ ನಿಮ್ಮ ಆಳಕ್ಕೆ ಮುಟ್ಟಲಿಕ್ಕೆ ಆಗುತ್ತಿರಲಿಲ್ಲ' ಎಂದು ಆತ್ಮೀಯತೆಯಿಂದ ಬರೆದಿದ್ದಾರೆ.

ಅಶೋಕ ನರೋಡೆ ಅವರು ಏಕಲವ್ಯ ಪಾತ್ರ: ಒಂದು ಅಧ್ಯಯನ ಕರ್ನಾಟಕ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧದಲ್ಲಿ ಜಹೊನ ಅವರ ಅದಮ್ಯ ಕೃತಿಯ ಬಗೆಗೆ ವಿಶ್ಲೇಷಿಸುತ್ತಾ; “ಕನ್ನಡದಲ್ಲಿ ಏಕಲವ್ಯ'ನ ಕುರಿತಾಗಿ ಬಂದಿರುವ ಕೃತಿಗಳಲ್ಲಿಯೇ ಅದಮ್ಯ ಇಡಿಯಾಗಿ ಬೇರೆಯಾಗಿದೆ. ಸಾಹಿತ್ಯ ಪರಂಪರೆಗೆ ಹೊಸ ತಿರುವನ್ನು ನೀಡಿದೆ' ಎಂದು ಬರೆಯುತ್ತಾರೆ.

ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರು ಕೃತಿಯನ್ನು ಓದಿ ಗುರುಕಾಣಿಕೆಯ ನೆಪದಲ್ಲಿ ಶೂದ್ರನ ಬೆರಳನ್ನು ಕತ್ತರಿಸುವ ಮಿಥ್ ಅನ್ನು ನೀವು ಬೆರಳು ಕೊಡದೆ ಉಳಿಸಿದ್ದೀರಲ್ಲ ಸರಿಯೇ? ಪ್ರಶ್ನಿಸಿದ್ದಾರೆ?. ಇಕ್ಕೆ ಜಹೊನಾ ಅವರು ಕುವೆಂಪು ಅವರು ತಮ್ಮ ಶೂದ್ರ ತಪಸ್ವಿ ನಾಟಕದಲ್ಲಿ ತಪಸ್ಸು ಮಾಡಿದ ಶೂದ್ರನ ಶಿರಚ್ಛೇದನ ಮಾಡಬೇಕೆನ್ನುವ ಮಿಥನ್ನು ಒಡೆದುಹಾಕಿ ಶಂಬೂಕನ ಕೊರಳನ್ನು ಉಳಿಸಿದ್ದಾರಲ್ಲ. ಹಾಗೆ ಇಲ್ಲಿ ಏಕಲವ್ಯನ ಹೆಬ್ಬೆರಳನ್ನು ಊಳಿಸಿದ್ದೇನೆ ಎಂದು ಸ್ಪಷ್ಟನೆ ಕೊಟ್ಟಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಡಾ.ಜಿ.ಎಸ್.ಶಿವರುದ್ರಪ್ಪ ಅವರು ಆ ದೃಷ್ಟಿಯಲ್ಲಿ ನಾನು ನೋಡಲಿಲ್ಲ, ಸರಿಯೆಂದು ತಮ್ಮ ಸಮ್ಮತಿ ಸೂಚಿಸಿದ್ದಾರೆ ಎಂದು ಕೃತಿಯಲ್ಲಿ ದಾಖಲಿಸಿದ್ದಾರೆ. ಕನ್ನಡದ ಮತ್ತೊಬ್ಬ ಮಹತ್ವದ ಕವಿಯಾದ ಡಾ.ಚನ್ನವೀರ ಕಣವಿ ಅವರು 'ಕುವೆಂಪು ಅವರು ಈ ಕೃತಿಯನ್ನು ಓದುವ ಸ್ಥಿತಿಯಲ್ಲಿದ್ದಿದ್ದರೆ ಖಂಡಿತವಾಗಿಯೂ ನಿಮ್ಮ ಬೆನ್ನು ತಟ್ಟಿ ಅಭಿನಂದಿಸದೆ ಇರುತ್ತಿರಲಿಲ್ಲ' ಎಂದು ಮುಕ್ತ ಮನದಿಂದ ಅಭಿನಂದಿಸಿದ್ದಾರೆ. ಹೀಗೆ ಒಬ್ಬೊಬ್ಬರ ಅನಿಸಿಕೆಯೂ ಒಂದೊಂದು ವಿಶಿಷ್ಟ ಭಾವನೆಯನ್ನು ಹಾಗೂ ಹೃದಯ ವೈಶಾಲ್ಯತೆಯನ್ನು ಬಿಂಬಿಸುತ್ತದೆ. ಈ ಪ್ರತಿಕ್ರಿಯೆಗಳನ್ನು ಕೃತಿಯ ಕಡೆಯಲ್ಲಿ ಲೇಖಕರು ಕೊಟ್ಟಿದ್ದಾರೆ. ಪ್ರತಿಕ್ರಿಯಿಸಿರುವ ಸಹೃದಯ ಓದುಗರಿಗೆ ಹೃದಯದ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಅದಮ್ಯ ಕಾದಂಬರಿಯಲ್ಲಿ ಏಕಲವ್ಯನ ಬೆರಳನ್ನು ಉಳಿಸುವ ಅಗತ್ಯ ಇತ್ತೇ? ಮಿಥ್‌ವೊಂದನ್ನು ಹೀಗೆ ಪುನರ್ ರಚಿಸುವ ವಿಲಕ್ಷಣ ಅಂಶಗಳೇನು ಮೂಲಪಠ್ಯದಲ್ಲಿವೆಯೆ ಎಂಬ ಪ್ರಶ್ನೆಗಳು ಸಹಜ. ಇಂಥ ಪ್ರಶ್ನೆಗಳಿಗೆ ಜ.ಹೊ.ನಾ. ಅವರು ಕಾದಂಬರಿಯಲ್ಲಿ ಸಂದರ್ಭಗಳ ಮೂಲಕ ಉತ್ತರಿಸಿದ್ದಾರೆ. 'ಮಾನವನ ಮಹಾನ್ ಯಾತ್ರೆಯಲ್ಲಿ ಕಂಡ ಈ ಕೊರತೆ ಅನೇಕ ವರ್ಷಗಳಿಂದ ನನ್ನನ್ನು ನಿರಂತರ ಕಾಡಿತು. ಪರಿಹಾರ ಕಾಣದೆ ಪರಿತಪಿಸಿದೆ. ಏಕಲವ್ಯನ ಹೆಬ್ಬೆರಳನ್ನು ಗುರುಕಾಣಿಕೆಯ ನೆಪದಲ್ಲಿ ಬಲಿತೆಗೆದುಕೊಂಡ ಪರಂಪರೆ ಅತ್ಯಂತ ಹೀನವಾಗಿ ಅಸಹನೀಯವಾಗಿ ಕಂಡಿತು. ಅದನ್ನೂ ಒಂದು ಸಂಸ್ಕೃತಿ ಎಂದು ಕೊಂಡಾಡುವ ಮನೋದೌರ್ಬಲ್ಯಕ್ಕೆ ಮರುಗಿದೆ. 'ದ್ರೋಣ', 'ಅರ್ಜುನ' ಪ್ರಶಸ್ತಿ ನೀಡುತ್ತಾ ತ್ಯಾಗಮೂರ್ತಿ ಏಕಲವ್ಯನನ್ನು ಕಡೆಗಣಿಸಿ ಮಾಡುತ್ತಿರುವ ಮೋಸಕ್ಕೆ, ದೇಶದ ನಿರ್ವೀರ್ಯತೆಗೆ ಕೊರಗಿದೆ. ಏಕಲವ್ಯನಿಗಾದ, ಆಗುತ್ತಿರುವ ಅನ್ಯಾಯಕ್ಕಾಗಿ ನೊಂದು ಬೆಂದೆ. ನ್ಯಾಯಕ್ಕಾಗಿ, ಮೌಲ್ಯಕ್ಕಾಗಿ, ಮಾನವತೆಗಾಗಿ ಹೃದಯ ತಹತಹಿಸಿತು. ಅಂದಿನಿಂದ ಇಂದಿನವರೆಗೆ ಈ ದೇಶದ ಸಂಸ್ಕೃತಿಯನ್ನು ತಡಕಾಡಿದೆ. ಒಳಸರಿದು ಅಂತರಂಗವನ್ನು ಕಡೆಯಬೇಕಾಯ್ತು, ಕಡೆದೆ. ಅದರ ಫಲವಾಗಿ ಮೂಡಿದೆ ಮಣ್ಣಿನಕಣ್ಣು ತೆರೆದ ಈ ಕೃತಿ' ಎಂದು ಲೇಖಕರು

ಬರೆದುಕೊಂಡಿದ್ದಾರೆ.

ಅದಮ್ಯ ಕಾದಂಬರಿಯ ಪ್ರವೇಶಕ್ಕೂ ಮುನ್ನ ಓದುಗರಿಗೆ ಸೂಚನಾ ರೂಪದಲ್ಲಿ ಮೇಲಿನ ಪದ್ಯ ಪ್ರವೇಶಕ್ಕೆ ಅಣಿ ಮಾಡಿಕೊಡುತ್ತದೆ. ಇದು ಓದುಗರಿಗೆ ಒಂದು ಸ್ಪಷ್ಟಮಾರ್ಗ ಎನ್ನುವಂತಿದೆ. ಇದು ಕುವೆಂಪು ಅವರ ಪ್ರಭಾವದ ಫಲ.  ಅದಮ್ಯ ಕಾದಂಬರಿಯ ವಸ್ತು ಆಯ್ಕೆ ಪಾರಂಪರಿಕ ನೆಲೆಯಲ್ಲಿದೆ. ಆದರೆ ನಿರೂಪಣೆ ಮತ್ತು ಆಶಯ ವಿಭಿನ್ನವಾಗಿದೆ. ರಾಜಕುಮಾರರು ಬೇಟೆಗೆ ಹೋಗಲು ಅನುಮತಿ ಕೇಳುವುದು.. ಭೀಷ್ಮ–ದ್ರೋಣರ ಸಂವಾದ, ಬೇಟೆಯಿಂದ ಬಂದ ಅರ್ಜುನನ ಅಸಹನೆ, ನಾಯಿಯ ಬಾಯಿಗೆ ಬಾಣದ ಪ್ರಸಂಗ, ಅರ್ಜುನನ ಮೂಲಕ ದ್ರೋಣ ಮತ್ತು ಏಕಲವ್ಯರ' ಭೇಟಿ. ದ್ರೋಣರು ಅಶ್ವತ್ಥಾಮನಿಗೆ ರಹಸ್ಯವಾಗಿ ವಿದ್ಯೆ ಹೇಳಕೊಡುತ್ತಿದ್ದು, ಅರ್ಜುನನಿಗೆ ತಿಳಿದು ಗುರುವನ್ನೇ ಪ್ರಶ್ನಿಸುವುದು. ದ್ರೋಣರಿಗೆ ತಾಯಿ ಪ್ರೀತಿಯ ಕೊರತೆಯಿದೆ ಎನ್ನುವ ಅಂಶವನ್ನು ದ್ರೋಣರ ಮೂಲಕ ಹೇಳಿಸಿರುವುದು. ದ್ರೋಣರ ಪಶ್ಚಾತ್ತಾಪ, ದ್ರುಪದನ ಪ್ರಸಂಗ ಧ್ರುವ ನಕ್ಷತ್ರ, ಕೋಳಿ, ಬಾವಲಿ, ಹುತ್ತ, ಮುಟ್ಟಿದರೆ ಮುನಿ (ಲಜ್ಜಾಲತೆ), ಗಿಡುಗ, ರೇಷ್ಮೆಹುಳು, ಸಗಣಿಹುಳು ಮತ್ತು ದ್ರೋಣರ ಪ್ರತಿಮೆಗಳು ಇವುಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು ಲೇಖಕರು ಕಾದಂಬರಿಯನ್ನು ಇನ್ನಷ್ಟು ಬಿಗಿಗೊಳಿಸಿದ್ದಾರೆ. ಏಕಲವ್ಯ ತುಂಬಾ ವಿವೇಕವಂತನಂತೆ ವಯಸ್ಸಿಗೂ ಮೀರಿ ಅರ್ಜುನನಿಗೆ ತಿಳಿ ಹೇಳುತ್ತಾನೆ. ಲೇಖಕರೇ ಮಧ್ಯ ಪ್ರವೇಶಿಸಿ ಮಾತನಾಡಿದಂತಿದೆ; ಜಲಗಾರನಲ್ಲಿ ಕುವೆಂಪು ಅವರು ಪರಕಾಯ ಪ್ರವೇಶ ಮಾಡಿದಂತೆ.

ಜಾತಿ ಕಾರಣದಿಂದ ಶಸ್ತ್ರಾಸ್ತ್ರ ವಿದ್ಯೆ ದ್ರೋಣರಿಂದ ಸಿಗದಿದ್ದುದಕ್ಕೆ ಹತಾಶನಾದ ಏಕಲವ್ಯ ಮುಟ್ಟಿದರೆ ಮುನಿ ಗಿಡದ ನಡಾವಳಿಕೆಯಿಂದ ತನ್ನ ನಡಾವಳಿಕೆಯನ್ನು ಬದಲಾಯಿಸಿಕೊಳ್ಳುತ್ತಾನೆ. ಮನುಷ್ಯ ಸಂಪರ್ಕವಾದ ಮೈ ಮುದುಡಿಕೊಂಡಿದ್ದರೇನಂತೆ ಪ್ರಕೃತಿಯ ಅಮೃತ ಸ್ಪರ್ಶದಿಂದ ಅರಳಿ ನಿಲ್ಲುವ ನೈಜಗುಣ ಈತನಿಗೆ ಸಂತೋಷ ನೀಡುತ್ತದೆ. ಜೊತೆಗೆ ಅಬ್ಬೆ ಹೇಳುವ ಶ್ರದ್ಧೆ ಎಲ್ಲವನ್ನು ಕರುಣಿಸಿ ಕಳಿಸುತ್ತದೆ. 'ಬರ ಇರದ, ಕೊರತೆ ಕಾಣದ ಬೀಡು ಕಾಡು' ಎಂಬ ಮಾತು ಪ್ರಭಾವ ಬೀರುತ್ತದೆ.  ತಂದೆ ಧ್ರುವ ನಕ್ಷತ್ರವನ್ನು ಆದರ್ಶವಾಗಿಸಿಕೊಳ್ಳಲು ಸೂಚಿಸಿದಾಗ ದ್ರೋಣರ ಮಾನವೀಯ ಅಂತಃಕರಣದ ಸೆಳತಕ್ಕೆ ಒಳಗಾಗಿ ಪ್ರತಿಮೆ ರಚಿಸುತ್ತಾನೆ. ಸೂರ್ಯನಿಂದ ಬಂದ ಬೆಳಕಿನ ಕೋಲು ಏಕಲವ್ಯ ಧನಸ್ಸು ನಿರ್ದೇಶಿಸುವಂತೆ ಕಾಣುತ್ತದೆ. ಗುರುವಿನ ನಾಮಸ್ಮರಣೆ ಮಾಡುತ್ತ ಅಭ್ಯಾಸ ಮಾಡುತ್ತಿರುತ್ತಾನೆ. ಆದರೆ ಆಂತರಿಕ ಸೂಕ್ಷ್ಮದ ತೊಡಕಿರುತ್ತದೆ.

ತಾಯಿಕೋಳಿಯು ವಯಸ್ಸಿಗೆ ಬಂದ ಕೋಳಿಯನ್ನು ಅಟ್ಟುವ ರೂಪಕ ಅರ್ಥಪೂರ್ಣವಾಗಿದೆ. ತನ್ನ ಕಾಲ ಮೇಲೆ ತಾನು ನಿಂತು ಅನ್ಯರ ಆಶ್ರಯದಿಂದ ಮುಕ್ತವಾಗದೆ ವಿಶ್ವವನ್ನು ಕಾಣಲಾಗುವುದಿಲ್ಲ ಎಂಬುದು ಸಾಂಕೇತಿಕ ರೂಪ. ಈ ಪ್ರಸಂಗದಿಂದ 'ನರಗುರು ನಿಮಿತ್ತ ಮಾತ್ರ, ನಿತ್ಯ ಸತ್ಯ ಗುರು ಅಂತರಂಗದಲ್ಲೇ ಅವಿತಿದ್ದಾನೆ' ಎಂಬುದು ಅರಿವಾಗುತ್ತದೆ. ಸ್ವತಂತ್ರ್ಯವಾಗಿರಲು ಬಯಸಿ ಕೋಳಿಯ ಪ್ರತಿಮೆ ನಿರ್ಮಿಸುತ್ತಾನೆ. ಈ ಸಂದರ್ಭದಲ್ಲಿ ಅರ್ಜುನನಿಗೆ ಇತ್ತ ವಚನದ ನೆರಳಿನಲ್ಲಿಯೇ ತನ್ನ ವಿಶ್ವವನ್ನು ಕಾಣಲಿಚ್ಛಿಸುವ ಪರಾವಲಂಬನೆ ದ್ರೋಣನಿಗೆ ಬೇಸರ ಮಾಡಿಸುತ್ತದೆ. ಈ ಸೂಕ್ಷ್ಮತೆ ಏಕಲವ್ಯನ ಯಶಸ್ಸಿಗೆ ಕಾರಣವೆಂದು ಸಂತಸ ಪಡುತ್ತಾರೆ. ಈ ಸಂದರ್ಭದಲ್ಲಿ ಪರಾವಲಂಬೆಯ ಅರಿವು ಅರ್ಜುನನಿಗೂ ಆಗುತ್ತದೆ.

ಗುರಿಯನ್ನು ಹಿಡಿತಕ್ಕೆ ನೀಡಿದ ಪಕ್ಷಿಯ ಏಕಾಗ್ರತೆ ಗಮನಿಸುತ್ತಾನೆ. ಅಂತರ್ ಸೂಕ್ಷ್ಮದ ಅರಿವಾಗುತ್ತದೆ. ಗಿಡುಗ ಪ್ರತಿಮೆಯನ್ನು ಸ್ಥಾಪಿಸುತ್ತಾನೆ. ರೇಷ್ಮೆ ಹುಳುವಿನಿಂದ ಹೃದಯದಾಳಕ್ಕೆ ಇಳಿಯುವುದನ್ನು, ಶಬ್ದದ ಮಧ್ಯೆ ನಿಶ್ಯಬ್ಧವಾಗಿರುವುದನ್ನು, ಬಹುದೂರದ ಸಣ್ಣ ಶಬ್ದವನ್ನು ಸ್ಪಷ್ಟವಾಗಿ ಕೇಳುವ ಶಕ್ತಿಯನ್ನು ಕಂಡುಕೊಳ್ಳುತ್ತಾನೆ. ರೂಪಾಂತರ ಹೊಂದಿ ಗೂಡನ್ನು ಭೇದಿಸಿಕೊಂಡು ಬರುವ ಚಿಟ್ಟೆಯು ನಿಗೂಢವನ್ನು ಭೇದಿಸುವ ರಹಸ್ಯವನ್ನು ಅಂತರಂಗಕ್ಕೆ ಬೋಧಿಸುತ್ತದೆ. ಹಾಗಾಗಿ ಅದರ ಪ್ರತಿಮೆ ಸಗಣಿಹುಳು. ಈಚಲ ಮರವನ್ನು ಅಪ್ಪಿನಿಂತ ಅರಳಿಮರ. ವಾಲ್ಮೀಕಿಯ ಪ್ರತೀಕವಾಗಿ ಹುತ್ತ. ಮುಂತಾದ ರೂಪಕಗಳ ಮೂಲಕ ಕಾದಂಬರಿ ಮತ್ತು ಏಕಲವ್ಯನ ವಿಕಾಸದ ಹಂತಗಳನ್ನು ರೂಪಿಸಿರುವುದು ಔಚಿತ್ಯಪೂರ್ಣವಾಗಿದೆ.

ಏಕಲವ್ಯ ಗಾಢ ಅನುಭವವನ್ನು ಮನವಿಟ್ಟು ಕೇಳಿದ ದ್ರೋಣರಿಗೆ ಮೈಯೆ ಹುತ್ತವಾದಂಥೇ ಆವರೆಗೆ ಕಂಡರಿಯದ ನಿಗೂಢ ಅದರ ಒಳಗಿಂದ ಹೊರ ಹೊಮ್ಮಿದಂತೆ ಭಾಸವಾಗುತ್ತದೆ. ಬಾವಲಿ ಪ್ರತಿಮೆ, ಬಾವಲಿಗೆ ಕಣ್ಣು ಮಂದವಾಗಿರುವುದರಿಂದ ಅದು ಕಿವಿಯಿಂದ ಅಷ್ಟೇ ಸೂಕ್ಷ್ಮವನ್ನೂ ಗ್ರಹಿಸುತ್ತದೆ. ಶಬ್ದ ತರಂಗದ ಮೂಲಕ ವಸ್ತುವಿನ ವಾಸ್ತವ ಸ್ಥಿತಿಯನ್ನರಿವ ಒಳಸೂಕ್ಷ್ಮವನ್ನು ಇಂದ್ರಿಯಗಳಲ್ಲಿ ಸೆರೆಹಿಡಿಯುವುದನ್ನು ಕಲಿಯುತ್ತಾನೆ. ಏಕಲವ್ಯನಿಗೆ ವಿದ್ಯೆಯನ್ನು ನಿರಾಕರಿಸಿದ ನನ್ನ ಮೇಲೆ ಕ್ರೋಧ'ಗೊಳ್ಳದೆ ಒಳ್ಳೆಯದನ್ನೇ ಹಾರೈಸಿದ ಅವನ ಹೃದಯ ಶ್ರೀಮಂತಿಕೆಗೆ ದ್ರೋಣರು ಮಣಿಯುತ್ತಾರೆ. ಏಕಲವ್ಯನಿಗೆ ಪ್ರಾಶಸ್ತ್ಯವಿದೆ ಎಂಬುದನ್ನು ಹಲಸಿನ ಮರ, ಕಾಮನ ಬಿಲ್ಲಿನ ಪ್ರತಿಮೆಗಳು ಸಾಕ್ಷೀಕರಿಸುತ್ತವೆ. ಏಕಲವ್ಯನ ಅಭ್ಯಾಸಕ್ಕೆ ಅಡ್ಡಿಮಾಡಿದ ಬೇಟೆ ನಾಯಿಯ ಬೊಗಳುವಿಕೆ ಇದೆ. ಶಬ್ದವೇಧಿ ಮೂಲಕ ಏಕಲವ್ಯ ಬಾಣ ಹೂಡಿದ್ದಾನೆ. ಇದಕ್ಕೆ ಜ.ಹೊ.ನಾ ನೀಡುವ ಕಾರಣಗಳೇ ಭಿನ್ನವಾಗಿದೆ. 'ನಿನ್ನೆ ನಾನು ನಾಯಿಯ ಬಾಯಿಗೆ ಬಿಟ್ಟ ಬಾಣಗಳು ನನ್ನ ಬಿಲ್ಜಾಣ್ಮೆ ಮೆರೆಯಲೆಂದಲ್ಲ. ನಾಯಿ ಬೊಗಳಿದ ಕಾರಣಕ್ಕೂ ಅಲ್ಲ. ಬೊಗಳುವುದು ನಾಯಿಯ ಸ್ವಭಾವ. ಆ ನಾಯಿ ಬೇಟೆಗಾಗಿಯೇ ಬಂದು ಬೊಗಳಿದ್ದು. ಅದಕ್ಕಾಗಿಯೆ

ಪರಿಣಿತಿ ಪಡೆದದ್ದು, ಅದರ ಆ ಧ್ವನಿಯಲ್ಲಿ 'ನಾನು' ಎಂಬ ಅಹಂಕಾರ. ನಾನು ಹೊಡೆದ ಬಾಣಗಳು ಆ ಅಹಂಕಾರದ ಬಾಯಿಗೆ ಬಿಗಿದ ಬಾಯಿಬೀಗಗಳು ಅಷ್ಟೆ' ನಾಯಿಯ ಅಹಂಕಾರಕ್ಕೆ ಬಾಣ ಹೊಡೆದೆ ಎನ್ನುತ್ತಾನೆ ಏಕಲವ್ಯ. ಆದರೆ ಏಕಲವ್ಯನ ಮಾತಿನಲ್ಲಿ ಅಹಂಕಾರವಾಗಲೀ, ದೈನ್ಯತೆಯಾಗಲೀ ಇರಲಿಲ್ಲ. ಮಮಕಾರ ರಹಿತ ನಿವೇದನೆ ಮಾತ್ರ ತುಂಬಿತ್ತು. ಎಂಬುದನ್ನು ನಯವಾಗಿ ಚಿತ್ರಿಸಿದ್ದಾರೆ.

ಕಥೆಯ ಹಂದರ ತೀರಾ ಕಿರಿದು. ಮಹಾಭಾರತದ ಪ್ರಸಂಗವನ್ನೆ ಹೋಲುತ್ತದೆ. ಇಲ್ಲಿ ವರ್ಣನೆಗಳೇ ಮುಖ್ಯ ಅನಿವಾರ್ಯ. ಅವುಗಳ ಮೂಲಕವೇ ಕಥೆ ಮೆಲ್ಲಮೆಲ್ಲನೆ ಸಾಗಬೇಕು. ಕಥೆಯಲ್ಲಿ ಸಂಕೀರ್ಣತೆಯಾಗಲಿ, ಮೂಲೆ ಮೊಡಕುಗಳಾಗಲಿ, ಬಾಗು-ಬಳುಕುಗಳಾಗಲಿ, ಕವಲು-ಕವಡುಗಳಾಗಲಿ ಇಲ್ಲ. ಅದರ ನಡೆ ನೇರ ಹಾಗೂ ಗಂಭೀರ, ಸ್ವಗತ ಆತ್ಮಕಥೆ ಸಂಭಾಷಣೆಗಳ ಮೂಲಕ ಕತೆ ಸಾಗುತ್ತದೆ. ಕಾಲೈಕ್ಯ, ಕ್ರಿಯೈಕ್ಯೆ ಮತ್ತು ಸ್ಥಲೈಕ್ಯಗಳು ಮೂರು ಇಲ್ಲಿ ಕೈಗೂಡುತ್ತವೆ. ಪ್ರೇಮ ಈ ಕಾದಂಬರಿಯ ಮೂಲಧಾತು. ನಿಸರ್ಗ ಪ್ರೇಮ, ಗುರುಪ್ರೇಮ, ಶಿಷ್ಯಪ್ರೇಮ ಮತ್ತು ಮಾತೃಪ್ರೇಮ ಕಾದಂಬರಿಯನ್ನೆಲ್ಲ ಆವರಿಸಿಕೊಂಡಿವೆ. ಎಲ್ಲ ಪ್ರೇಮಕ್ಕೂ ನಿಸರ್ಗ ಪ್ರೇಮವೇ ಮುಖ್ಯವಾದುದು ಎಂಬುದು ಸರ್ವ ವಿದಿತ. ಈ ಪ್ರೇಮ ಕೇವಲ ಭಾವುಕತೆಯಲ್ಲಿ ಪರ್ಯಾವಸಾನವಾಗದೆ, ತಾತ್ತ್ವಿಕ ವೈಜ್ಞಾನಿಕ ಹಾಗೂ ವೈಚಾರಿಕ ನೆಲೆಗಳನ್ನೊಳಗೊಂಡಿದೆ. ಮನುಷ್ಯನ ಬಾಳ್ವೆಗೆ ಮಾತ್ರವಲ್ಲ ವಿದ್ಯೆಗೂ ಸೃಷ್ಟಿಯೇ ಮೂಲ ಎಂಬ ತತ್ತ್ವವನ್ನು ಬಾವಲಿ ಪ್ರತಿಮೆಯ ಮೂಲಕ ಸಂಕೇತಿಸುತ್ತಾರೆ. ಶಬ್ದತರಂಗಗಳಿಂದ ಬಹುದೂರದಲ್ಲಿರುವ ವಸ್ತುಗಳನ್ನು ಗ್ರಹಿಸಬಹುದೆಂಬ ವೈಜ್ಞಾನಿಕ ಸತ್ಯವನ್ನೂ, ತಾಯಿಕೋಳಿಯ ಪ್ರತಿಮೆಯ ಮೂಲಕ ಸಂಕೇತಿಸುತ್ತಾರೆ. ಮತ್ತೊಬ್ಬರ ಆಶ್ರಯದಿಂದ ಪಾರಾಗಿ ಪೂರ್ಣ ಸ್ವಾತಂತ್ರ್ಯವನ್ನು ಪಡೆದುಕೊಂಡಲ್ಲದೆ ವಿಶ್ವದ ರಹಸ್ಯವನ್ನು ಭೇದಿಸಲಾಗದೆಂಬ ವೈಚಾರಿಕ ನಿಲವನ್ನೂ ಈ ಕೃತಿಯಲ್ಲಿ ಕಾಣಬಹುದು.

**ಪರಾಮರ್ಶನ ಗ್ರಂಥಗಳು**

1. ಜ.ಹೊ.ನಾರಾಯಣಸ್ವಾಮಿ. 1993, ಅದಮ್ಯ, ಮಾನವ ಪ್ರಕಾಶನ, ಹಾಸನ.
2. ಎಸ್.ವಿ. ಪರಮೇಶ್ವರಭಟ್ಟ. 1995, ರಸಋಷಿ ಕುವೆಂಪು. ಮೊದಲ ಮುದ್ರಣ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ ಮೈಸೂರು.
3. ಅಶೋಕ ನರೋಡೆ, 2001, ಏಕಲವ್ಯನ ಪಾತ್ರ : ಒಂದು ಅಧ್ಯಯನ, ಶ್ರೀಸಿದ್ದೇಶ್ವರ ಪ್ರಕಾಶನ, ಹಂದಿಗುಂದ.
4. ನರಹಳ್ಳಿ ಬಾಲಸುಬ್ರಹ್ಮಣ್ಯ. 2002, ಕುವೆಂಪು ನಾಟಕಗಳ ಅಧ್ಯಯ ನ. ಮೊದಲ ಮುದ್ರಣ.
5. ಶ್ರೀಕುವೆಂಪು ಜನ್ಮಶತಮಾನೋತ್ಸವ ವರ್ಷ. 2008, ಕುವೆಂಪು: ಪುನರ್ಮನನ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ ಮೈಸೂರು

6. ದೇ.ಜ.ಗೌ. 2008, ಕುವೆಂಪು ದರ್ಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಥಮ ಮುದ್ರಣ.
7. ಡಾ. ಚಕ್ಕೆರೆ ಶಿವಶಂಕರ್. 2009 ಸಹ್ಯಾದ್ರಿಯ ಸೂರ್ಯ. ಕನ್ನಡ ಸಾಹಿತ್ಯ ಪರಿಷತ್ತು ಪ್ರಥಮ ಮುದ್ರಣ.
8. ನರಸಿಂಹಮೂರ್ತಿ. ಹೆಚ್.ಕೆ. 2009, ಕನ್ನಡ ಸಾಹಿತ್ಯದಲ್ಲಿ ಏಕಲವ್ಯ, ಸಾಮಾಜಿಕ ನ್ಯಾಯ ಸಂಸ್ಕೃತಿ ಪ್ರಕಾಶನ, ತುಮಕೂರು.
9. ಕುವೆಂಪು, ಬೆರಳ್‌ಗೆ ಕೊರಳ್, 2012, ಉದಯ ರವಿ ಪ್ರಕಾಶನ, ಮೈಸೂರು.
10. ಡಾ. ವಿಠಲರಾವ್ ಗಾಯಕ್‌ವಾಡ. ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ.